**ಅತ್ಯಾದ್ಯತೆ**

ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸರ್ವ ಶಿಕ್ಷಣ ಅಭಿಯಾನ ನೃಪತುಂಗ ರಸ್ತೆ, ಬೆಂಗಳೂರು

ಸಂ.ಸಶಿಅ/ಸಿ.ಎ.ಎಲ್.ಸಿ/2009–10 ದಿ : 03.11.2009

**ಸುತ್ತೋಲೆ**

ವಿಷಯ: 2009–10ನೇ ಸಾಲಿನಲ್ಲಿ ಸಿ.ಎ.ಎಲ್.ಸಿ ಚಟುವಟಿಕೆಯಡಿ ಗುರುತಿಸಿದ ಶಾಲೆಗಳನ್ನು ಸಿದ್ದಗೊಳಿಸುವ ಬಗ್ಗೆ.

***

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಕಂಪ್ಯೂಟರ್ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. 2009–10ನೇ ಸಾಲಿನಲ್ಲಿ ಇದಕ್ಕಾಗಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಆಯ್ಕೆ ಮಾಡಲಾದ ಪ್ರತಿ ಶಾಲೆಗೆ 5 ಕಂಪ್ಯೂಟರ್‌ಗಳು, ಯು.ಪಿ.ಎಸ್ ಮತ್ತು ಮಲ್ಟಿಮೀಡಿಯಾ ಪ್ರೊಜೆಕ್ಟರ್‌ಗಳನ್ನು ಒದಗಿಸಲಾಗುತ್ತದೆ.

2009–10ನೇ ಸಾಲಿನಲ್ಲಿ ಸಿ.ಎ.ಎಲ್.ಸಿ ಕಾರ್ಯಕ್ರಮದಡಿಯಲ್ಲಿ ಕಂಪ್ಯೂಟರ್ ಕೇಂದ್ರಗಳನ್ನು ಸ್ಥಾಪಿಸಲು ಜಿಲ್ಲಾವಾರು ಶಾಲೆಗಳ ಸಂಖ್ಯೆಯ ಪಟ್ಟಿಯನ್ನು ಪತ್ರದೊಂದಿಗೆ ಲಗತ್ತಿಸಿದೆ. ಕೆಳಕಂಡ ನಿಯಮಗಳಂತೆ ಶಾಲೆಗಳ ಆಯ್ಕೆಯನ್ನು ಮಾಡತಕ್ಕದ್ದು.

ಆಯ್ಕೆಯಾದ ಶಾಲೆಗಳಲ್ಲಿ ಈ ಕೆಳಕಂಡಂತೆ ಅಗತ್ಯ ಸಿದ್ದತಾ ಕಾರ್ಯವನ್ನು ಕೈಗೊಳ್ಳಲು ಪ್ರತಿ ಶಾಲೆಗೆ ರೂ.30,000/- ಗಳನ್ನು 2009–10ನೇ ಸಾಲಿನಲ್ಲಿ ಜಿಲ್ಲೆಯ ಆವಿಷ್ಕೃತ ಚಟುವಟಿಕೆಯಡಿಯಲ್ಲಿನ ಸಿ.ಎ.ಎಲ್.ಸಿ ಅನುದಾನದಿಂದ ಬಿಡುಗಡೆ ಮಾಡಲು ಅನುಮತಿಯನ್ನು ನೀಡಲಾಗಿದೆ.

1. ನಿಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಕ್ಲಸ್ಟರ್‌ನಲ್ಲಿ, ಪ್ರತಿ ಕ್ಲಸ್ಟರ್‌ಗೆ ಒಂದು ಶಾಲೆಗೆ ಕಂಪ್ಯೂಟರ್ ಕೇಂದ್ರ ಸ್ಥಾಪನೆಯಾಗಿರುವುದನ್ನು ಖಚಿತಪಡಿಸಿಕೊಳ್ಳುವುದು. ಇಲ್ಲಿಯವರೆಗೂ ಪರಿಗಣಿಸದೇ ಇರುವ ಕ್ಲಸ್ಟರ್‌ಗಳಿಗೆ ಈ ಸಾಲಿನಲ್ಲಿ ಪ್ರಾಮುಖ್ಯತೆಯನ್ನು ನೀಡಬೇಕು. ಎಲ್ಲಾ ಕ್ಲಸ್ಟರ್ ಗಣಕ ಕೇಂದ್ರಗಳನ್ನು ಒದಗಿಸಿದ ನಂತರ ದೊಡ್ಡ ಕ್ಲಸ್ಟರ್‌ಗಳು/ಹಿಂದುಳಿದ ಕ್ಲಸ್ಟರ್‌ಗಳಿಗೆ ಪ್ರಾಮುಖ್ಯತೆಯನ್ನು ನೀಡುವ ಉದ್ದೇಶದಿಂದ ಹೆಚ್ಚುವರಿಯಾಗಿ ಅನುಮೋದಿತ ಕೇಂದ್ರಗಳಲ್ಲಿ ಮತ್ತೊಂದು ಕೇಂದ್ರವನ್ನು ನೀಡತಕ್ಕದ್ದು.
2. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಾಖಲಾತಿ ಸಂಖ್ಯೆ 300 ಇದ್ದು ಶಾಲೆಗೆ ಈ ಮೊದಲು ಯಾವುದೇ ಯೋಜನೆಯಡಿಯಲ್ಲಿ ಶಾಲೆಗೆ ಕಂಪ್ಯೂಟರ್‌ಗಳು ಸರಬರಾಜಾಗಿರಬಾರದು.
3. ಆಯ್ಕೆ ಮಾಡಲಾದ ಶಾಲೆಯಲ್ಲಿ ಹೆಚ್ಚುವರಿ ಕೊಠಡಿ ಮತ್ತು ವಿದ್ಯುತ್ ಸೌಲಭ್ಯ ಇರಬೇಕು.

ಮೇಲ್ಕಂಡ ವಿವರದಂತೆ ಶಾಲೆಗಳನ್ನು ಆಯ್ಕೆ ಮಾಡಿ ಜಿಲ್ಲೆಗೆ 2009–10ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಸಿ.ಎ.ಎಲ್.ಸಿ ಚಟುವಟಿಕೆಯಡಿಯಲ್ಲಿ ಅನುಮೋದಿತ ಮೊತ್ತದಿಂದ ಪ್ರತಿ ಶಾಲೆಗೆ ರೂ.30,000/-ದಂತೆ ಅನುದಾನವನ್ನು ಕೊಠಡಿಗಳನ್ನು ಸಿದ್ದಗೊಳಿಸುವ ಉದ್ದೇಶಕ್ಕಾಗಿ ಬಿಡುಗಡೆ ದಿ.15.11.2009 ರೊಳಗೆ ಮಾಡತಕ್ಕದ್ದು. ಬಿಡುಗಡೆ ಮಾಡಲಾದ ರೂ. 30,000/- ಗಳಲ್ಲಿ ಶಾಲೆಯಲ್ಲಿ 5 ಕಂಪ್ಯೂಟರ್‌ಗಳನ್ನು ಅಳವಡಿಸಲು ಬೇಕಾದ ಪ್ರತ್ಯೇಕ ಟೇಬಲ್‌ಗಳು, ಮಕ್ಕಳ ಬಳಕೆಗೆ ಬೇಕಾದ 15 ಕುರ್ಚಿಗಳು ಹಾಗೂ ಬಾಗಿಲು ಮತ್ತು ಕಿಟಕಿಗಳ ಭದ್ರತೆಯ ವ್ಯವಸ್ಥೆಯ ಕಾರ್ಯವನ್ನು ನಿರ್ವಹಿಸುವಂತೆ ಆಯ್ಕೆ ಮಾಡಲಾದ ಶಾಲೆಗಳಿಗೆ ಸೂಚಿಸತಕ್ಕದ್ದು.

ಮೇಲ್ಕಂಡಂತೆ ಕ್ರಮವಹಿಸಿ ಆಯ್ಕೆಯಾದ ಶಾಲೆಗಳ ವಿವರವನ್ನು ಕೆಳಕಂಡ ನಮೂನೆಯಲ್ಲಿ ಭರ್ತಿಮಾಡಿ ದಿ.25.11.2009ರೊಳಗಾಗಿ ರಾಜ್ಯ ಯೋಜನಾ ಕಚೇರಿಗೆ ತಲುಪುವಂತೆ

ಸರ್ವ ಶಿಕ್ಷಣ ಅಭಿಯಾನ
ಸ್ವೀಕೃತಿ ಸಂ: 2590
ದಿನಾಂಕ: 9/11/2009
ಸಹಿ: G. Lal

ಕಳುಹಿಸಲು ಹಾಗೂ ಇದರ ಪ್ರತಿಯನ್ನು ssacalc@gmail.com ಇದಕ್ಕೆ ಇ-ಮೈಲ್ ಮೂಲಕವೂ ಕಳುಹಿಸಲು ತಿಳಿಸಿದೆ.

| S.N | Block | School Name and Address | Students strength | Availability of additional room (Y/N) | Availability of electricity (Y/N) | School/HM's contact number |
|---|---|---|---|---|---|---|
| | | | | | | |

ಶಾಲೆಗಳ ಆಯ್ಕೆಯಲ್ಲಿ ಮೇಲ್ಕಂಡ ನಿಯಮಗಳನ್ನು ಚಾಚೂ ತಪ್ಪದೆ ಅನುಸರಿಸಲು ಸೂಚಿಸಿದೆ. ಆಯ್ಕೆಗಾಗಿ ಜಿಲ್ಲೆಯಲ್ಲಿ ಅನುಸರಿಸಲಾದ ಪ್ರಕ್ರಿಯ ಕುರಿತಂತೆ ಮುಂದೆ ನಡೆಸಲಾಗುವ ಮಾಸಿಕ ಸಭೆಯಲ್ಲಿ ಜಿಲ್ಲೆಗಳಿಂದ ವಿವರಣೆಯನ್ನು ಪಡೆಯಲಾಗುವುದೆಂದು ಈ ಮೂಲಕ ತಿಳಿಸಿದೆ.

ಜಿಲ್ಲೆಯ ಡಯಟ್‌ನಲ್ಲಿನ ಇ.ಟಿ ವಿಭಾಗದ ಹಿರಿಯ ಉಪನ್ಯಾಸಕರು/ ಉಪನ್ಯಾಸಕರುಗಳನ್ನು ಸಿ.ಎ.ಎಲ್.ಸಿ ನೋಡಲ್ ಅಧಿಕಾರಿಗಳಾಗಿ ನೇಮಿಸಿರುವುದರಿಂದ ಶಾಲೆಗಳ ಆಯ್ಕೆಯಲ್ಲಿ ಅವರ ಸಲಹೆಗಳನ್ನು ತಪ್ಪದೆ ಪಡೆಯುವಂತೆ ಹಾಗೂ ಆಯ್ಕೆಯಾದ ಪಟ್ಟಿಯ ಪ್ರತಿಯನ್ನು ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ ಕಳುಹಿಸುವಂತೆ ತಿಳಿಸಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

ಪ್ರತಿಯನ್ನು,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲೆಗಳ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಸಿದೆ.
4. ಕಚೇರಿ ಪ್ರತಿ.

# Sarva Shiksha Abhiyan Karnataka

## School list for supply of computers under CALC programme during 2009-10

| Sl.No. | Districts | Total Clusters | Cluster covered so far | 400 schools for 2009-10 |
|---|---|---|---|---|
| 1 | KOLAR | 87 | 71 | 21 |
| 3 | RAMANAGARA | 60 | 49 | 16 |
| 2 | UTTARA KANNADA | 154 | 127 | 35 |
| 4 | CHAMRAJNAGAR | 70 | 58 | 17 |
| 5 | MANDYA | 112 | 96 | 23 |
| 6 | DHARWAD | 84 | 72 | 17 |
| 8 | HAVERI | 98 | 85 | 18 |
| 11 | CHIKMAGALUR | 102 | 89 | 20 |
| 7 | BELLARY | 112 | 98 | 21 |
| 9 | GULBARGA | 154 | 135 | 26 |
| 10 | SHIMOGA | 98 | 86 | 17 |
| 12 | BANGALORE URBAN | 126 | 112 | 21 |
| 13 | DAVANGERE | 98 | 89 | 14 |
| 14 | DAKSHINA KANNADA | 88 | 80 | 13 |
| 15 | MYSORE | 112 | 102 | 17 |
| 16 | UDUPI | 70 | 64 | 11 |
| 17 | CHICKBALLAPURA | 69 | 64 | 10 |
| 18 | TUMKUR | 140 | 130 | 17 |
| 19 | HASSAN | 112 | 106 | 13 |
| 20 | BELGAUM | 168 | 167 | 8 |
| 21 | KODAGU | 42 | 42 | 5 |
| 23 | CHITRADURGA | 84 | 88 | 5 |
| 22 | BANGALORE RURAL | 68 | 73 | 5 |
| 24 | RAICHUR | 70 | 76 | 5 |
| 25 | GADAG | 54 | 60 | 5 |
| 26 | BAGALKOT | 74 | 83 | 5 |
| 27 | KOPPAL | 56 | 66 | 5 |
| 28 | BIDAR | 70 | 83 | 5 |
| 29 | BIJAPUR | 76 | 104 | 5 |
| | **Total** | **2708** | **2555** | **400** |